# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ನಂ.ಸ.ಕಾ.ನಿ.ಅ./ಕೋ.ಉ.ವಿ/ಪಿ.ಆರ್/31/2020-21

ಸಹಾಯಕ ಕಾರ್ಯಪಾಲಕ ಅಭಿಯಂತರರವರ ಕಛೇರಿ,
ಕೋರಮಂಗಲ ಉಪವಿಭಾಗ,
ಪಾಲಿಕೆ ಕಟ್ಟಡಗಳು, 2ನೇ ಅಡ್ಡರಸ್ತೆ,
5ನೇ ಬ್ಲಾಕ್, ಕೋರಮಂಗಲ,
ಬೆಂಗಳೂರು. ದಿನಾಂಕ:31-03-2021

**-: ಸಭೆ ತಿಳುವಳಿಕೆ ಪತ್ರ :-**

**ವಿಷಯ :-** ಆಡುಗೋಡಿ ವಾರ್ಡ್ ಸಂಖ್ಯೆ.147ರ ವಾರ್ಡ್ ಮಟ್ಟದ ಕುಂದು ಕೊರತೆಗಳ ಬಗ್ಗೆ ಚರ್ಚಿಸಲು ವಾರ್ಡ್ ಸಮಿತಿ ಸಭೆಯನ್ನು ಆಯೋಜಿಸಿರುವ ಬಗ್ಗೆ.

**ಉಲ್ಲೇಖ:-** ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಚೇರಿ ಆದೇಶದ ಪತ್ರ ಸಂಖ್ಯೆ: ಬಿ12(5)/ಪಿಆರ್/35/2020-21, ದಿನಾಂಕ:21-09-2020.

* * * * *

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಆದೇಶದ ರೀತ್ಯಾ ವಾರ್ಡ್ ಸಂಖ್ಯೆ.147(ಆಡುಗೋಡಿ) ವಾರ್ಡ್ ಸಮಿತಿ ಸಭೆಯನ್ನು ನೋಡಲ್ ಅಧಿಕಾರಿಗಳ ಅಧ್ಯಕ್ಷತೆಯಲ್ಲಿ **ದಿನಾಂಕ:03.04.2021** ರಂದು ಬೆಳಗ್ಗೆ **10.00** ಗಂಟೆಗೆ ವಾರ್ಡ್ ಸಮಿತಿ ಸಭೆಯು **ಬಿ.ಬಿ.ಎಂ.ಪಿ. ವಾಣಿಜ್ಯ ಸಂಕೀರ್ಣ, ಆಡುಗೋಡಿ, ಹೊಸೂರು ರಸ್ತೆ (ಕಾರ್ಯಪಾಲಕ ಅಭಿಯಂತರರ ಕಛೇರಿ)** ಇಲ್ಲಿ ಜರುಗಲಿದ್ದು, ಸದರಿ ಸಭೆಗೆ ವಾರ್ಡ್ ಸಮಿತಿ ಸದಸ್ಯರು ಹಾಗೂ ಸಂಬಂಧಪಟ್ಟ ಅಧಿಕಾರಿಗಳು ತಪ್ಪದೇ ಹಾಜರಾಗಲು ಕೋರಿದೆ ಹಾಗೂ ಸಭೆಗೆ ಗೈರು ಹಾಜರಾಗುವ ಅಧಿಕಾರಿಗಳ ಹೆಸರನ್ನು ಮೇಲಾಧಿಕಾರಿಗಳ ಗಮನಕ್ಕೆ ತರಲಾಗುವುದು.

**ಸಭೆಯಲ್ಲಿ ಚರ್ಚಿಸಬಹುದಾದ ವಿಷಯಗಳು:** 1) ಕೋವಿಡ್-19ರ ಸಂಬಂಧ ಸೋಂಕು ಹರಡುವುದನ್ನು ತಡೆಗಟ್ಟುವ ಸಂಬಂಧ ತೆಗೆದುಕೊಳ್ಳಬೇಕಾದ ಮುಂಜಾಗ್ರತ ಕ್ರಮಗಳ ಬಗ್ಗೆ. 2) ಒಂಟಿಮನೆ ನಿರ್ಮಾಣದ ಫಲಾನುಭವಿಗಳ ಆಯ್ಕೆಯ ಬಗ್ಗೆ 3) ವಾರ್ಡ್ ವ್ಯಾಪ್ತಿಯಲ್ಲಿ ಕುಡಿಯುವ ನೀರು ಹಾಗೂ ಒಳಚರಂಡಿಗೆ ಸಂಬಂಧಿಸಿದ ವಿಷಯಗಳ ಬಗ್ಗೆ. 4) ವಾರ್ಡ್‌ನಲ್ಲಿ ಘನತ್ಯಾಜ್ಯ ಸಂಗ್ರಹಣೆ ಮತ್ತು ವಿಲೇವಾರಿ ಬಗ್ಗೆ. 5) ವಾರ್ಡ್‌ನ ವಿವಿಧ ಕಾಮಗಾರಿಗಳ ಅಭಿವೃದ್ಧಿ ಕಾರ್ಯಗಳ ಬಗ್ಗೆ. 6) ರಸ್ತೆ ಗುಂಡಿಗಳನ್ನು ಮುಚ್ಚುವ ಬಗ್ಗೆ. 7) ಬೀದಿ ದೀಪಗಳ ನಿರ್ವಹಣೆ ಬಗ್ಗೆ. 8) ವಿದ್ಯುತ್ ಸರಬರಾಜು (ಬೆಸ್ಕಾಂ)ಗೆ ಸಂಬಂಧಿಸಿದ ವಿಷಯದ ಬಗ್ಗೆ ಹಾಗೂ ಇನ್ನಿತರೆ ವಿಷಯಗಳು ಅಧ್ಯಕ್ಷರ ಸೂಚನೆಯಂತೆ.

ಕಾರ್ಯದರ್ಶಿ, ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ 147, ಆಡುಗೋಡಿ

**ರವರಿಗೆ,**
ಸಂಬಂಧಪಟ್ಟ ಸದಸ್ಯರುಗಳು/ಅಧಿಕಾರಿಗಳು
ವಾರ್ಡ್ ವ್ಯಾಪ್ತಿಯ ಬಡಾವಣೆಗಳ ನಿವಾಸಿಗಳಿಗೆ/
ಸಾರ್ವಜನಿಕ ಪ್ರಕಟಣೆ

**ಪ್ರತಿಯನ್ನು:-**

1. ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಅಧಿಕಾರಿಗಳಿಗೆ ಮಾಹಿತಿಗಾಗಿ ಸಲ್ಲಿಸಿದೆ.
2. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
3. ಪೊಲೀಸ್ ಇನ್ಸ್‌ಪೆಕ್ಟರ್ (ಸಿವಿಲ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಂಗಳೂರು ವಿದ್ಯುತ್ ಸರಬರಾಜು ನಿಗಮ, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
6. ಸಹಾಯಕ ಕಂದಾಯ ಅಧಿಕಾರಿಗಳು, ಕೋರಮಂಗಲ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
7. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣಾ ವಿಭಾಗ, ಬಿ.ಟಿ.ಎಂ.ಲೇಔಟ್ ವಿಭಾಗ, ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
8. ಪೊಲೀಸ್ ಇನ್ಸ್‌ಪೆಕ್ಟರ್ (ಟ್ರಾಫಿಕ್), ಆಡುಗೋಡಿ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
9. ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು, ಬಿ.ಬಿ.ಎಂ.ಪಿ (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.
10. ಸಹಾಯಕ ನಿರ್ದೇಶಕರು, ತೋಟಗಾರಿಕೆ, ಬಿ.ಬಿ.ಎಂ.ಪಿ. (ದಕ್ಷಿಣ), ಜಯನಗರ, ಬೆಂಗಳೂರು ಮಾಹಿತಿಗಾಗಿ ಸಲ್ಲಿಸಿದೆ.

Scanned with CamScanner

# Ward Committee Meeting Ward 147 Adugodi

Saturday

DATE 03 04 2021

| Sl NO | Name | Designation | Signature |
|---|---|---|---|
| 1 | Basavaraj R. Kabade | Chairman | [signature] |
| 2 | Manjula [Ex-corp] | Member | |
| 3 | Sampath [Ex-crop] | Member | |
| 4 | A.M Thyagaraju | Member | |
| 5 | V. Hemavathi | Member | Hemavathi V |
| 6 | Rathanamma | Member | [signature] R. |
| 7 | Bhagyalakshmi | Member | |
| 8 | M. Gopal | Member | |
| 9 | B.D. Nagaraj | Member | [signature] |
| 10 | Pandiyan | Member | [signature] |
| 11 | Kempararaju | Member | [signature] |
| 12 | Chandrashekar. P | Secretary | [signature] 03/04/2021 |

Scanned with CamScanner

Saturday

Officials

DATE 03 04 2021

| SL NO | Name | Designation | Signature |
|---|---|---|---|
| 1 | PURNA PRASAD | T.I. JHI BBMP | [signature] |
| 2 | Shreesh R peddeere | RO Samarthanam Dry waste [ZCO] | [signature] |
| 3 | Mangal. | Ward coordinator (Dry waste RO) | [signature] |
| 4 | Maruthi. A | Marshal | [signature] |
| 5 | Lakshmi. R | Saahas | [signature] |
| 6 | Khadar sheriff | Soukar | [signature] |
| 7 | S. VIJayKumaR | Revenue TI | [signature] |
| 8 | Yuvakishore. K. | B.B.M.P. Health Inspector. | [signature] |

Scanned with CamScanner

**ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ**
**ಕೋರಮಂಗಲ ಉಪ-ವಿಭಾಗದ, ಆಡುಗೋಡಿ ವಾರ್ಡ್ ಸಂಖ್ಯೆ-147**
**ದಿನಾಂಕ: 03-04-2021 ರಂದು ಏಪ್ರಿಲ್-2021 ಮಾಹೆಯ**
**ವಾರ್ಡ್ ಸಮಿತಿ ಸಭೆಯ ನಡವಳಿಗಳು**

ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147ರ ರವರ ಅಧ್ಯಕ್ಷತೆಯಲ್ಲಿ ಬಿ.ಬಿ.ಎಂ.ಪಿ ವಾಣಿಜ್ಯ ಸಂಕೀರ್ಣ, (ಕಾರ್ಯಪಾಲಕ ಅಭಿಯಂತರರ ಕಛೇರಿ) ಆಡುಗೋಡಿಯಲ್ಲಿ ದಿನಾಂಕ:03.04.2021 ರಂದು ಬೆಳಗ್ಗೆ 10.00 ಗಂಟೆಗೆ ವಾರ್ಡ್ ಸಮಿತಿ ಸದಸ್ಯರುಗಳು ಹಾಗೂ ಸಂಬಂಧಿಸಿದ ಅಧಿಕಾರಿಗಳೊಂದಿಗೆ ನಡೆದ ಸಭೆಯ ನಡವಳಿಗಳು:

**ಹಾಜರಿದ್ದ ಸದಸ್ಯರು:-**

1. ಶ್ರೀಮತಿ ಹೇಮಾವತಿ
2. ಶ್ರೀಮತಿ ರತ್ನಮ್ಮ
3. ಶ್ರೀ ಬಿ.ಡಿ. ನಾಗರಾಜು
4. ಶ್ರೀ ಪಾಂಡಿಯನ್
5. ಶ್ರೀ ಕೆಂಪರಾಜು

**ಹಾಜರಿದ್ದ ಅಧಿಕಾರಿಗಳು:-**

1. ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ವಾರ್ಡ್-147, ಆಡುಗೋಡಿ
2. ಶ್ರೀ ಚಂದ್ರಶೇಖರ್ .ಪಿ, ಸದಸ್ಯ ಕಾರ್ಯದರ್ಶಿ, ವಾರ್ಡ್-147, ಆಡುಗೋಡಿ
3. ಶ್ರೀ ದುರ್ಗಾ ಪ್ರಸಾದ್, ಕಿರಿಯ ಆರೋಗ್ಯ ಪರಿವೀಕ್ಷಕರು
4. ಶ್ರೀ ಎಸ್. ವಿಜಯ್ ಕುಮಾರ್, ತೆರಿಗೆ ನಿರೀಕ್ಷಕರು, ಬಿ.ಬಿ.ಎಂ.ಪಿ.
5. ಶ್ರೀ ಯುವ ಕಿಶೋರ್ .ಕೆ, ಆರೋಗ್ಯ ಪರಿವೀಕ್ಷಕರು, ಬಿ.ಬಿ.ಎಂ.ಪಿ.
6. ಶ್ರೀಮತಿ ಶೃತಿ ಆರ್, ಸಮರ್ಥನಮ್
7. ಶ್ರೀಮತಿ ಮಂಗಳ .ಎಂ, ಸಮರ್ಥನಮ್
8. ಶ್ರೀ ಮಾರುತಿ .ಎ, ಮಾರ್ಷಲ್
9. ಶ್ರೀಮತಿ ಲಕ್ಷ್ಮೀ .ಆರ್, ಸಾಹಸ್

* * * * *

ಶ್ರೀ ಬಸವರಾಜ್ ಕಬಾಡೆ, ಅಧೀಕ್ಷಕ ಅಭಿಯಂತರರು ಮತ್ತು ನೋಡಲ್ ಅಧಿಕಾರಿಗಳು ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು ವಾರ್ಡ್ ಸಂಖ್ಯೆ 147 ರವರು ಸಭೆಯಲ್ಲಿ ಹಾಜರಿದ್ದ ಎಲ್ಲಾ ವಾರ್ಡ್ ಸಮಿತಿ ಸದಸ್ಯರುಗಳಿಗೆ ಹಾಗೂ ವಾರ್ಡ್‌ನ ಅಧಿಕಾರಿಗಳಿಗೆ ಸಭೆಗೆ ಸ್ವಾಗತಿಸಿ, ವಾರ್ಡ್ ವ್ಯಾಪ್ತಿಯಲ್ಲಿನ ಕುಂದು ಕೊರತೆಗಳು ಮತ್ತು ಅಭಿವೃದ್ಧಿ ಕಾಮಗಾರಿಗಳ ಹಾಗೂ ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಚರ್ಚಿಸಲು ತಿಳಿಸಿದರು.

ಶ್ರೀ ಕೆಂಪರಾಜು, ಶ್ರೀ ಬಿ.ಡಿ. ನಾಗರಾಜು ಮತ್ತು ಶ್ರೀ ಪಾಂಡಿಯನ್ ರವರು ಮಾತನಾಡಿ, ಕೋವಿಡ್ ಮುಂಜಾಗ್ರತಾ ಕ್ರಮಗಳ ಬಗ್ಗೆ ಮತ್ತು ಕೋವಿಡ್ ರೋಗದಿಂದ ಉಂಟಾಗುವ ಪರಿಣಾಮಗಳ ಬಗ್ಗೆ ಬಿ.ಬಿ.ಎಂ.ಪಿ. ಆರೋಗ್ಯ ಇಲಾಖೆ ವತಿಯಿಂದ ಕರಪತ್ರಗಳನ್ನು ಮುದ್ರಿಸಿ, ವಾರ್ಡ್-147 ವ್ಯಾಪ್ತಿಯಲ್ಲಿ ಬರುವ ವಾಣಿಜ್ಯ ಅಂಗಡಿಗಳು, ಹೋಟೆಲ್‌ಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಹಾಗೂ ಜನದಟ್ಟಣೆ ಪ್ರದೇಶಗಳಲ್ಲಿ ಕೋವಿಡ್ ಬಗ್ಗೆ ಸಾರ್ವಜನಿಕರಿಗೆ ಮತ್ತು ಮಾಲೀಕರುಗಳಿಗೆ ಅರಿವು ಮೂಡಿಸಲು ಕರಪತ್ರಗಳನ್ನು ಹಂಚಲು ಸೂಕ್ತ ಕ್ರಮ ಕೈಗೊಳ್ಳಬೇಕೆಂದು ತಿಳಿಸಿದರು.



Scanned with CamScanner

ಶ್ರೀ ಪಾಂಡಿಯನ್ ರವರು ಮಾತನಾಡಿ, ಆಡುಗೋಡಿ ವ್ಯಾಪ್ತಿಯಲ್ಲಿ ಬರುವ ರಾಜೇಂದ್ರನಗರ ಪ್ರದೇಶದಲ್ಲಿ ಜನಸಂದಣಿ ಹೆಚ್ಚಿದ್ದು, ಒಣ ತ್ಯಾಜ್ಯ ಉತ್ಪಾದನೆ ಹೆಚ್ಚಾಗುತ್ತಿದ್ದು, ಸಮರ್ಪಕವಾಗಿ ಒಣತ್ಯಾಜ್ಯ ಸಂಗ್ರಹಣೆಯಾಗುತ್ತಿರುವುದಿಲ್ಲ. ಇದರಿಂದ ಸ್ಥಳೀಯ ನಿವಾಸಿಗಳು ಕಸ ಎಲ್ಲೆಂದರಲ್ಲಿ ಎಸೆದು ಬ್ಲಾಕ್‌ಸ್ಪಾಟ್ ನಿರ್ಮಾಣವಾಗುವ ಸಂಭವ ಹೆಚ್ಚಾಗಿರುತ್ತದೆ. ಆದ್ದರಿಂದ ಪ್ರಸ್ತುತ ಒಣತ್ಯಾಜ್ಯ ಸಂಗ್ರಹಿಸುವ ವಾಹನದ ಜೊತೆಗೆ ಹೆಚ್ಚುವರಿಯಾಗಿ ಒಣ ತ್ಯಾಜ್ಯ ಸಂಗ್ರಹಿಸುವ ವಾಹನವನ್ನು ನಿಯೋಜಿಸಲು ಸಭೆಯಲ್ಲಿ ಕೋರಿದರು.

ಶ್ರೀ ಕೆಂಪರಾಜು ರವರು ಮಾತನಾಡಿ, ಕೋರಮಂಗಲ 7ನೇ ಬ್ಲಾಕ್‌ನಲ್ಲಿ ಬರುವ ಸಾಯಿಬಾಬಾ ದೇವಸ್ಥಾನ ಮತ್ತು ಬಾಷ್ ಕಂಪನಿ ಗೇಟ್ ಮುಂಭಾಗದ ಮರಗಳ ಕೊಂಬೆಗಳು ಬೀಳುವ ಹಂತದಲ್ಲಿರುತ್ತದೆ. ಅರಣ್ಯ ಇಲಾಖೆಯವರಿಗೆ ಈ ಬಗ್ಗೆ ತಿಳಿಸಿ, ಕೊಂಬೆಗಳನ್ನು ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ಸಭೆಯಲ್ಲಿ ತಿಳಿಸಿದರು.

ಶ್ರೀಮತಿ ರತ್ನಮ್ಮ ರವರು ಮಾತನಾಡಿ, ಕೋರಮಂಗಲ 8ನೇ ಬ್ಲಾಕ್‌ನಲ್ಲಿರುವ 2ನೇ 'ಎಫ್' ಮುಖ್ಯರಸ್ತೆಯಲ್ಲಿರುವ ಮರಗಳ ರೆಂಬೆಗಳು ಬಾಗಿದ್ದು ಬೀಳುವ ಹಂತದಲ್ಲಿರುತ್ತದೆ. ಆದ್ದರಿಂದ ಮರದ ಕೊಂಬೆಗಳನ್ನು ತೆರವುಗೊಳಿಸಲು ತಿಳಿಸಿದರು.

ಶ್ರೀ ಪಾಂಡಿಯನ್ ರವರು ಮಾತನಾಡಿ, ಬೆಸ್ಕಾಂ ಇಲಾಖೆಯ ಸಮಸ್ಯೆಗಳನ್ನು ಅನೇಕ ಬಾರಿ ಈ ಸಭೆಯಲ್ಲಿ ಚರ್ಚಿಸಿದ್ದರೂ ಸಮಸ್ಯೆ ನಿವಾರಣೆಯಾಗಿರುವುದಿಲ್ಲ. ಈ ಸಮಸ್ಯೆಗಳ ಬಗ್ಗೆ ಕ್ರಮವಹಿಸಲು ತಿಳಿಸಿದರು.

ಕೊನೆಯದಾಗಿ ಸದಸ್ಯ ಕಾರ್ಯದರ್ಶಿಗಳು ಸಭೆಗೆ ಹಾಜರಾದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳಿಗೆ ವಂದನೆಯನ್ನು ತಿಳಿಸುತ್ತಾ, ಇಂದಿನ ಸಭೆಯಲ್ಲಿ ಚರ್ಚಿಸಿದ ವಿಷಯಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಮುಂದಿನ ಸಭೆಯಲ್ಲಿ ಪೂರ್ಣ ಮಾಹಿತಿಯನ್ನು ಒದಗಿಸಬೇಕೆಂದು ಕಾರ್ಯದರ್ಶಿ ಮತ್ತು ಇಲಾಖಾ ಅಧಿಕಾರಿಗಳಿಗೆ ತಿಳಿಸಿ, ಸಭೆಯನ್ನು ಮುಕ್ತಾಯಗೊಳಿಸಲಾಯಿತು.

03/04/2024
(ಶ್ರೀ ಚಂದ್ರಶೇಖರ್ .ಪಿ)
ಸದಸ್ಯ ಕಾರ್ಯದರ್ಶಿ
ವಾರ್ಡ್-147 ಆಡುಗೋಡಿ ವಿಭಾಗ

03/4/24
(ಶ್ರೀ ಬಸವರಾಜ್ ಕಬಾಡೆ)
ನೋಡಲ್ ಅಧಿಕಾರಿಗಳು
ಹಾಗೂ ವಾರ್ಡ್ ಸಮಿತಿ ಅಧ್ಯಕ್ಷರು
ವಾರ್ಡ್-147, ಆಡುಗೋಡಿ



Scanned with CamScanner

Date: 03/04/2021






Scanned with CamScanner